# ಬ್ರಿಕ್ಸ್ ಎನ್‌ಎಸ್‌ಎ ಸಭೆಯ ನೇಪಥ್ಯದಲ್ಲಿ ಚೀನಾದ ಎನ್‌ಎಸ್‌ಎಯೊಂದಿಗೆ ಭಾರತದ ರಾಷ್ಟ್ರೀಯ ಭದ್ರತಾ ಸಲಹೆಗಾರ ಭೇಟಿ

ಸೆಪ್ಟೆಂಬರ್ 12, 2024

ರಷ್ಯಾದ ಸೈಂಟ್ ಪೀಟರ್ಸ್‌ಬರ್ಗ್‌ನಲ್ಲಿ 2024ರ ಸೆಪ್ಟೆಂಬರ್ 12ರಂದು ನಡೆದ ಬ್ರಿಕ್ಸ್ ರಾಷ್ಟ್ರಗಳ ಭದ್ರತಾ ವಿಚಾರಗಳಿಗೆ ಸಂಬಂಧಿಸಿದ ಉನ್ನತ-ಮಟ್ಟದ ಅಧಿಕಾರಿಗಳು/ರಾಷ್ಟ್ರೀಯ ಭದ್ರತಾ ಸಲಹೆಗಾರರ ಸಭೆಯ ನೇಪಥ್ಯದಲ್ಲಿ ರಾಷ್ಟ್ರೀಯ ಭದ್ರತಾ ಸಲಹೆಗಾರ ಶ್ರೀ ಅಜಿತ್ ದೋವಲ್, ಕೆಸಿ ಅವರು ಕಮ್ಯುನಿಸ್ಟ್ ಪಾರ್ಟಿ ಆಫ್ ಚೀನಾ (ಸಿಪಿಸಿ) ರಾಜಕೀಯ ಬ್ಯೂರೋ ಸದಸ್ಯ ಮತ್ತು ಕೇಂದ್ರ ವಿದೇಶಾಂಗ ವ್ಯವಹಾರಗಳ ಆಯೋಗದ ಕಚೇರಿಯ ನಿರ್ದೇಶಕ ಗೌರವಾನ್ವಿತ ಶ್ರೀ ವಾಂಗ್ ಯಿ ಅವರನ್ನು ಭೇಟಿಯಾದರು.

2. ಪರಿಸ್ಥಿತಿಯು ಸ್ಥಿರಗೊಂಡು, ದ್ವಿಪಕ್ಷೀಯ ಸಂಬಂಧಗಳು ಮರುಸ್ಥಾಪನೆಯಾಗುವ ಸನ್ನಿವೇಶವನ್ನು ಸೃಷ್ಟಿಸಲು ಅನುವಾಗುವಂತೆ, ವಾಸ್ತವಿಕ ಗಡಿ ನಿಯಂತ್ರಣ ರೇಖೆ(ಎಲ್‌ಎಸಿ)ಯುದ್ದಕ್ಕೂ ಉಳಿದಿರುವ ಸಮಸ್ಯೆಗಳಿಗೆ ಶೀಘ್ರ ಪರಿಹಾರವನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಇತ್ತೀಚೆಗೆ ನಡೆದಿರುವ ಪ್ರಯತ್ನಗಳನ್ನು ಪರಿಶೀಲಿಸಲು ಈ ಸಭೆಯು ಉಭಯ ದೇಶಗಳಿಗೆ ಅವಕಾಶವನ್ನು ಕಲ್ಪಿಸಿತು.

3. ಎಲ್‌ಒಸಿಯ ಉಳಿದ ಭಾಗಗಳಿಂದ ಸೇನೆಗಳನ್ನು ಸಂಪೂರ್ಣವಾಗಿ ವಾಪಸ್ ಕರೆಸಿಕೊಳ್ಳುವ ಕೆಲಸವನ್ನು ತುರ್ತಾಗಿ ಮಾಡಲು ಮತ್ತು ಈ ಪ್ರಯತ್ನಗಳನ್ನು ದ್ವಿಗುಣಗೊಳಿಸಲು ಎರಡೂ ಕಡೆಯವರು ಒಪ್ಪಿಕೊಂಡರು. ದ್ವಿಪಕ್ಷೀಯ ಸಂಬಂಧಗಳು ಸಹಜ ಸ್ಥಿತಿಯಲ್ಲಿರಬೇಕೆಂದರೆ ಗಡಿ ಪ್ರದೇಶಗಳಲ್ಲಿ ಶಾಂತಿ ಮತ್ತು ನೆಮ್ಮದಿ ಮತ್ತು ಎಲ್‌ಎಸಿಗೆ ಗೌರವ ನೀಡುವುದು ಅತ್ಯಗತ್ಯ ಎಂದು ಎನ್‌ಎಸ್‌ಎ ಮನವರಿಕೆ ಮಾಡಿಕೊಟ್ಟರು. ಉಭಯ ಸರ್ಕಾರಗಳು ಈ ಹಿಂದೆ ಮಾಡಿರುವ ಸಂಬಂಧಿತ ದ್ವಿಪಕ್ಷೀಯ ಒಪ್ಪಂದಗಳು, ಶಿಷ್ಟಾಚಾರಗಳು ಮತ್ತು ತಿಳುವಳಿಕೆಗಳಿಗೆ ಎರಡೂ ಕಡೆಯವರು ಸಂಪೂರ್ಣವಾಗಿ ಬದ್ಧರಾಗಿರಬೇಕು. ಭಾರತ-ಚೀನಾ ದ್ವಿಪಕ್ಷೀಯ ಸಂಬಂಧವು ಉಭಯ ದೇಶಗಳಿಗೆ ಮಾತ್ರವಲ್ಲ, ಈ ಪ್ರದೇಶ ಮತ್ತು ಜಗತ್ತಿಗೆ ಮಹತ್ವದ್ದಾಗಿದೆ ಎಂದು ಎರಡೂ ಕಡೆಯವರು ಒಪ್ಪಿಕೊಂಡರು.

4. ಇದಲ್ಲದೆ ಜಾಗತಿಕ ಮತ್ತು ಪ್ರಾದೇಶಿಕ ಪರಿಸ್ಥಿತಿಗಳ ಕುರಿತ ತಮ್ಮ ಅಭಿಪ್ರಾಯಗಳನ್ನೂ ಎರಡೂ ಕಡೆಯವರು ವಿನಿಮಯ ಮಾಡಿಕೊಂಡರು.

**ಸೈಂಟ್ ಪೀಟರ್ಸ್‌ಬರ್ಗ್**
**ಸೆಪ್ಟೆಂಬರ್ 12, 2024**